# ಗಾಳಿಪಟ ಜೋರು ಹಾರಾಟ!

■ ಪದ್ಮನಾಭ ಭಟ್



'ನಮ್ಮಪ್ಪ ಲೂಸಾಗ್ಬಿಟ್ಟಿದಾರೆ. ದಯವಿಟ್ಟು ಯಾರೂ ಕೈಲಿ ತಮಟೆ ಕೊಡ್ಬೇಡಿ' ಎಂದು ಹೇಳುತ್ತ ಯೋಗರಾಜ ಭಟ್ಟರ ಮಗಳು ಮಾಡಿದ ವಿಡಿಯೊ ಸೋಷಿಯಲ್ ಮೀಡಿಯಾದಲ್ಲಿ ಇತ್ತೀಚೆಗೆ ವೈರಲ್ ಆಗಿಬಿಟ್ಟಿತ್ತು. ಅವರ ಮಾತಿಗೆ ಒಗ್ಗರಣೆ ಹಾಕುವ ಹಾಗೆ, ನಟ ಗಣೇಶ್ ಅವರೂ ಆ ವಿಡಿಯೊ ಹಂಚಿಕೊಂಡು, 'ನೋಡಿದ್ರಾ ನಾನು ಭಟ್ಟರು ಲೂಸು ಅಂತ ಮೊದ್ಲಿಂದಾನೂ ಹೇಳ್ತಿದ್ದೆ. ಈಗ ಅವರ ಮಗಳೇ ಈ ವಿಷಯಾನ ಕನ್ಫರ್ಮ್ ಮಾಡಿದ್ದಾಳೆ' ಎಂಬ ರೀತಿಯ ಸಾಲುಗಳನ್ನೂ ಬರೆದುಕೊಂಡಿದ್ದರು. ಈ ವಿಡಿಯೊದಲ್ಲಿ ಭಟ್ಟರ ಮಗಳ ಮಾತಿನ ಜೊತೆಗೆ ಗಮನಸೆಳೆಯುವುದು, ಶೂ ಲೇಸ್ ಕಟ್ಟಿಕೊಳ್ಳುತ್ತ ತಬ್ಬಿಬ್ಬಾಗಿ ನೋಡುತ್ತಿರುವ ಭಟ್ಟರ ಮುಖಭಾವ. 'ಇದೆಲ್ಲ ಏನಾಗ್ತಿದೆ? ನನಗೂ ಇದಕ್ಕೂ ಏನು ಸಂಬಂಧ?' ಎಂಬ ರೀತಿಯ ಮುಗ್ಧವೋ ಉಡಾಫೆಯೋ ಹೇಳಲಾಗದ ಮುಖಭಾವದಲ್ಲಿ ಭಟ್ಟರು ಅಭಿಮಾನಿಗಳನ್ನೂ, ಪತ್ರಕರ್ತರನ್ನೂ, ಸಿನಿಮಾ ಮಂದಿಯನ್ನೂ ಎದುರುಗೊಳ್ಳುತ್ತಿದ್ದಾರೆ. ಅವರ ಮುಖಭಾವದಲ್ಲಿನ ಗುಣವೇ ಬರವಣಿಗೆಯಲ್ಲೂ ಮೂಡಿ, 'ಗಾಳಿಪಟ 2' ಸಿನಿಮಾದಲ್ಲಿಯೂ ಹರಿದಾಡಿ ಅದನ್ನು ಬಾನಂಗಳಲ್ಲಿ ಎತ್ತರೆತ್ತರಕ್ಕೆ ಹಾರಾಡಿಸುತ್ತಿರುವುದಂತೂ ನಿಜ. ಬಾಕ್ಸ್ ಆಫೀಸ್ ಲೆಕ್ಕಾಚಾರಗಳೂ ನಿರ್ಮಾಪಕರ ಜೋಳಿಗೆ ಭಾರವಾಗಿರುವ ಸುದ್ದಿಯನ್ನೇ ಕೊಡುತ್ತಿವೆ.

'ಗಾಳಿಪಟ 2' ಸಿನಿಮಾ ಭಟ್ಟರಿಗೆ ಸುಲಭದ ತುತ್ತೇನೂ ಆಗಿರಲಿಲ್ಲ. ನಾಲ್ಕು ವರ್ಷಗಳಲ್ಲಿ ಹಲವು ಸಲ ನಿಂತು, ಶುರುವಾಗಿ, ಮುಂದುವರೆದು ನಡೆಯುತ್ತಿದ್ದ ಜೂಟಾಟದಲ್ಲಿ ಭಟ್ಟರ ಬ್ಯಾಂಕ್ ಖಾತೆಯೂ ಹಗುರಾಗಿರುವುದು ಆಪ್ತ ವಲಯಕ್ಕೆ ಮಾತ್ರವೇ ಗೊತ್ತು. ಇದೆಲ್ಲದರ ಆಚೆಗೆ ಯೋಗರಾಜ ಭಟ್ಟರು ಮತ್ತು ಗಣೇಶ್ ಇಬ್ಬರಿಗೂ ಈ ಗೆಲುವಿನ ತುರ್ತು ಖಂಡಿತ ಇತ್ತು. ಆ ಗೆಲುವನ್ನು ಹತ್ತು ವರ್ಷದ ಹಿಂದೆ ಹಾರಿಸಿದ್ದ 'ಗಾಳಿಪಟ'ದ ಬಾಲವೇ ತಂದುಕೊಟ್ಟಿದೆ. ಹಾಗಾಗಿ ಯೋಗರಾಜ ಭಟ್ಟರ ಶಕ್ತಿ ಇರುವುದು ಎಲ್ಲಿ ಎಂಬುದನ್ನಷ್ಟೇ ಅಲ್ಲ, ಜನರು ಈಗಲೂ ಏನನ್ನು ಬಯಸುತ್ತಿದ್ದಾರೆ ಎಂಬುದನ್ನೂ ಈ ಚಿತ್ರ ಮತ್ತೊಮ್ಮೆ ಸಾಬೀತುಪಡಿಸಿದೆ.

ಹಾಗೆ ನೋಡಿದರೆ 'ಗಾಳಿಪಟ' ಸಿನಿಮಾದಲ್ಲಿದ್ದ ಬಂಧ–ಭಾವ ಎರಡೂ ಈ ಎರಡನೇ ಭಾಗದಲ್ಲಿ ಇಲ್ಲ; ಸರಾಗವಾಗಿ ಹರಿಯುತ್ತ ಕಾಡುವ ಕಥನದ ಓಘವೂ ಅಷ್ಟು ತೀವ್ರವಾಗಿಲ್ಲ. ಆದರೆ ಬಿಡಿ ಬಿಡಿಯಾದ ದೃಶ್ಯಗಳನ್ನು ತಾಜಾ ಅನಿಸುವ ಹಾಗೆ ಕಟ್ಟುವುದರಲ್ಲಿ ಮತ್ತು ಹರಿತವಾದ ಸಂಭಾಷಣೆಯಲ್ಲಿ ಭಟ್ಟರ ಯುವೋತ್ಸಾಹ ಚೂರೂ ಬತ್ತಿಲ್ಲ. ಅವರಷ್ಟು ಯೂಥ್‌ಫುಲ್ ಆಗಿ ಯೋಚಿಸುವ ನಿರ್ದೇಶಕರು ಚಂದನವನದಲ್ಲಿ ಬೆರಳೆಣಿಕೆಯಷ್ಟೂ ಇಲ್ಲ. ಹಾಗಾಗಿಯೇ ಸಿನಿಮಾ ಹಿಂದಿನ 'ಗಾಳಿಪಟ'ದಷ್ಟು ಚೆನ್ನಾಗಿಲ್ಲ ಎಂದು ಹೇಳುತ್ತಲೇ ಜನರು ಚಿತ್ರಮಂದಿರಕ್ಕೆ ನುಗ್ಗುತ್ತಿದ್ದಾರೆ.

ಈಗಾಗಲೇ ಈ ಸಿನಿಮಾ ಹಿಂದಿ ಭಾಷೆಗೂ ಡಬ್ ಆಗುತ್ತಿರುವ ಸುದ್ದಿ ಹೊರಬಿದ್ದಿದೆ. ನಾಯಕನಟ ಗಣೇಶ್ ಈ ಗೆಲುವಿಗೆ ಕೃತಜ್ಞತೆಗಳನ್ನು ಸೋಷಿಯಲ್ ಮೀಡಿಯಾದಲ್ಲಿ ಪತ್ರ ಬರೆಯುವುದರ ಮೂಲಕ ವ್ಯಕ್ತಪಡಿಸಿದ್ದಾರೆ. 'ಅಭಿಮಾನಿಗಳು ಸಂಭ್ರಮಿಸುವ ಪ್ರತಿ ಕ್ಷಣವೂ ಕಲಾವಿದನನ್ನು ಆಶೀರ್ವದಿಸಿದಂತೆ. ಆ ನಿಟ್ಟಿನಲ್ಲಿ ನಾನು ನಿಜಕ್ಕೂ ಅದೃಷ್ಟವಂತ' ಎಂದು ಹೇಳಿಕೊಂಡಿರುವ ಗಣೇಶ್, ತಮ್ಮ ಮೊದಲ ಸಿನಿಮಾದಿಂದಲೂ ಬೆನ್ನಿಗೆ ನಿಂತ ಪ್ರೇಕ್ಷಕರನ್ನು ಮನಸಾ ಸ್ಮರಿಸಿಕೊಂಡಿದ್ದಾರೆ. ಜನರ ಮನರಂಜಿಸುವ ಕಾಯಕವನ್ನು ಇನ್ನಷ್ಟು ಉತ್ಸಾಹದೊಂದಿಗೆ ಮುಂದುವರಿಸುವ ಇಂಗಿತವನ್ನೂ ವ್ಯಕ್ತಪಡಿಸಿದ್ದಾರೆ.

'ಗಾಳಿಪಟ 2' ಸಿನಿಮಾದ್ದು ಅಭೂತಪೂರ್ವ ಯಶಸ್ಸೇನೂ ಅಲ್ಲ. ಹಾಗೆಯೇ ಇದು ಭಟ್ಟರ ಬೆಸ್ಟ್ ಸಿನಿಮಾನೂ ಅಲ್ಲ. ಆದರೆ ಈ ಗೆಲುವಿನ ರಿಲೀಫ್ ಭಟ್ಟರಿಗೆ, ಗಣೇಶ್‌ಗೆ ಅಷ್ಟೇ ಅಲ್ಲ, ಕನ್ನಡ ಚಿತ್ರರಂಗಕ್ಕೂ ಅತ್ಯಗತ್ಯವಾಗಿತ್ತು ಎಂಬುದಂತೂ ನಿಜ. ■

